Date :25.11.2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ B.N.T. ವಕೀಲರಿಂದ –**

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಚಿತ್ರದುರ್ಗ ಜಿಲ್ಲೆಯ ಹೊಸರೈಲ್ವೇ ಮಾರ್ಗ ಯೋಜನೆಯ ಭೂಸ್ವಾಧೀನಾಧಿಕಾರಿ ದಿಃ 08.10.2021 ರಂದು ಹೊರಡಿಸಿದ ಸಾಮಾನ್ಯ ಐತೀರ್ಪಿನ ನಕಲು ದೃಢೀಕೃತ ಪ್ರತಿ ಮತ್ತು ಅವಾರ್ಡ ತಃಖ್ತೆಯ ದೃಢೀಕೃತ ಪ್ರತಿ ಹಾಗೂ ಪಾಲವ್ವನಹಳ್ಳಿ ಗ್ರಾಮದ ಒಂದು ಜಮೀನಿನ ಬಗ್ಗೆ ದಿಃ 29.10.2017 ರಂದು ಒಂದು ನೊಂದಣಿ ಕ್ರಯಪತ್ರವಾಗಿದ್ದು, ಅದರ ದೃಢೀಕೃತ ಪ್ರತಿ ಹಾಗೂ ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ ಒಂದು ಪಹಣಿ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–14 ರಿಂದ 17 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – ಎದುರುದಾರ 1 ಮತ್ತು 2 ರವರ ಪರ ಶ್ರೀಜಿ.ಎಸ್.ಎ. ಮತ್ತು ಡಿ.ಜಿ.ಪಿ. ವಕೀಲರಿಂದ –**

**(ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ನ್ಯಾಯಯುತ ದೃಷ್ಟಿಯಿಂದ ಕಾಲಾವಕಾಶ ನೀಡಿ ಪಾಟೀ ಸವಾಲು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.